# ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ



**Date: 30-01-2026**

## ಹುತಾತ್ಮ ದಿನಾಚರಣೆ-ಮಹಾತ್ಮ ಗಾಂಧಿಗೆ ಸಂಗೀತ ನಮನ

ಸರ್ವೋದಯ ದಿನಾಚರಣೆಯ ಅಂಗವಾಗಿ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಗಾಂಧಿ ಅಧ್ಯಯನ ಕೇಂದ್ರದ ವತಿಯಿಂದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಜ್ಯೋತಿ ಸಭಾಂಗಣದಲ್ಲಿ ವಿನೂತನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

"ಗಾಂಧಿ, ಸಂಗೀತ ಮತ್ತು ನಾಗರಿಕತೆಯ ಬಹುತ್ವ" ಎಂಬ ಶೀರ್ಷಿಕೆಯ ಈ ಕಾರ್ಯಕ್ರಮದ ಉದ್ದೇಶವನ್ನು ವಿವರಿಸಿದ ಸರ್ವೋದಯ ಇಂಟರ್ ನ್ಯಾಷನಲ್ ಟ್ರಸ್ಟ್ ನ ಅಧ್ಯಕ್ಷರಾದ ಪ್ರೊ. ಡಿ.ಜೀವನ್ ಕುಮಾರ್ ಸ್ವಾತಂತ್ರ್ಯ ಚಳವಳಿಯಲ್ಲಿ ಸಂಗೀತ ಮಹತ್ವದ ಪಾತ್ರ ವಹಿಸಿತ್ತೆಂದು ತಿಳಿಸಿದರು.

ಮಹಾತ್ಮ ಗಾಂಧೀಜಿಯವರು ಸಬರಮತಿ ಆಶ್ರಮದಲ್ಲಿ ಪ್ರತಿದಿನ ಭಜನೆಗಳ ಮೂಲಕ ಸರ್ವಧರ್ಮ ಸಮನ್ವಯದ ಸಂದೇಶವನ್ನು ಸಾರಿ ರಾಷ್ಟ್ರೀಯ ಭಾವೈಕ್ಯತೆಗೆ ಭದ್ರ ಬುನಾದಿ ಹಾಕಿಕೊಟ್ಟರೆಂದು ಅವರು ವಿವರಿಸಿದರು.

ಬಹುಮುಖಿ ಸಂಸ್ಕೃತಿಯ ಭಾರತೀಯ ನಾಗರಿಕತೆಯ ಆದರ್ಶಗಳನ್ನು ಯುವ ಪೀಳಿಗೆ ಮೈಗೂಡಿಸಿಕೊಂಡು ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಬೇಕಾದ ಅಗತ್ಯವನ್ನು ಅವರು ಒತ್ತಿ ಹೇಳಿದರು.

ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಬಿ.ರಮೇಶ್ ರವರು ಮಾತನಾಡಿ, ಸಾಂವಿಧಾನಿಕ ಮೌಲ್ಯಗಳು ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ಸಂರಕ್ಷಣೆ ಹೊಣೆಯನ್ನು ನಿರ್ವಹಿಸುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು.

ಗಾಂಧೀಜಿಯವರ ಸತ್ಯ, ಅಹಿಂಸೆ ಮತ್ತು ಸಹಿಷ್ಣುತೆಯ ಆದರ್ಶಗಳನ್ನು ಜೀವನಮಾರ್ಗವಾಗಿ ಅಳವಡಿಸಿಕೊಂಡು ಜಾತಿ, ಮತ, ಭಾಷೆಗಳ ಸಂಘರ್ಷದ ತಲ್ಲಣಗಳಿಂದ ದೇಶದ ಐಕ್ಯತೆಯನ್ನು ಸಂರಕ್ಷಿಸುವಂತೆ ಅವರು ವಿನಂತಿಸಿದರು.

ಪ್ರಖ್ಯಾತ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ವಿದ್ವಾಂಸರಾದ ಡಾ.ಕೆ.ಎಸ್. ವೈಶಾಲಿಯವರು ಸಮಷ್ಠಿ ಪ್ರಜ್ಞೆಯ ಪ್ರತೀಕವಾದ ಅನೇಕ ಭಜನೆಗಳನ್ನು ಸುಶ್ರಾವ್ಯವಾಗಿ ಹಾಡಿ ಮಹಾತ್ಮ ಗಾಂಧೀಜಿಯವರಿಗೆ ಸಂಗೀತ ನಮನ ಸಲ್ಲಿಸಿದರು.

ಕುಲಸಚಿವ (ಮೌಲ್ಯಮಾಪನ) ಪ್ರೊ.ರಮೇಶ್.ಬಿ. ಕುಡೇನಟ್ಟಿ, ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ ಜ್ಯೋತಿ ವೆಂಕಟೇಶ್ ಹಾಗೂ ಹಿರಿಯ ಪ್ರಾಧ್ಯಾಪಕರಾದ ಪ್ರೊ.ಕೆ.ಆರ್.ಜಲಜಾ, ಪ್ರೊ. ಮೇಧಾ ಇಟಗಿ ಹುಯಿಲಗೋಳ ಉಪಸ್ಥಿತರಿದ್ದರು. ಡಾ.ಮಾಲಿನಿ.ಎಂ. ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದ ಅಂಗವಾಗಿ ಗಾಂಧೀಜಿಯವರ ಜೀವನ ಮತ್ತು ಸಾಧನೆಯ ಕುರಿತಾದ ಛಾಯಾಚಿತ್ರ ಪ್ರದರ್ಶನವನ್ನು ಸಹ ಏರ್ಪಡಿಸಲಾಗಿತ್ತು. ಗಾಂಧೀಜಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಬಳಿಕ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಯಿತು.






ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
Dr. MANMOHAN SINGH
BENGALURU CITY UNIVERSITY
ಮಹಾತ್ಮಾ ಗಾಂಧಿ ಅಧ್ಯಯನ ಕೇಂದ್ರ
MAHATMA GANDHI STUDY CENTRE
78ನೇ ಹುತಾತ್ಮರ ದಿನ
78th Martyrs' Day
Venue: Jnana Jyothi Auditorium
Date 30th January 2026


ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
Dr. MANMOHAN SINGH
BENGALURU CITY UNIVERSITY
ಮಹಾತ್ಮಾ ಗಾಂಧಿ ಅಧ್ಯಯನ ಕೇಂದ್ರ
MAHATMA GANDHI STUDY CENTRE
78ನೇ ಹುತಾತ್ಮರ ದಿನ
78th Martyrs' Day
Venue: Jnana Jyothi Auditorium
Date 30th January 2026




ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
Dr. MANMOHAN SINGH
BENGALURU CITY UNIVERSITY
ಮಹಾತ್ಮಾ ಗಾಂಧಿ ಅಧ್ಯಯನ ಕೇಂದ್ರ
MAHATMA GANDHI STUDY CENTRE
78ನೇ ಹುತಾತ್ಮರ ದಿನ